**ಹೊರಗೆ ನಿಂತ ಪೊಲೀಸ್ ಚುನಾವಣಾಧಿಕಾರಿ ಬಳಿ ಹೇಳುತ್ತಿದ್ದದ್ದು ಕಿವಿಗೆ ಬಿತ್ತು. 'ಒಳಗೆ ಹೋದವ ಇನ್ನೂ ಅಲ್ಲಿ ಏನು ಮಾಡುತ್ತಿದ್ದಾನೆ' ?**

**ಮಿಂಚಿನಂತೆ ಯೋಚನೆಯೊಂದು ಅವನಿಗೆ ಹೊಳೆಯಿತು. ಮತಪತ್ರವನ್ನು ಮಧ್ಯಕ್ಕೆ ಮಡಚಿ ಎರಡು ಭಾಗವಾಗಿ ಹರಿದು ಮೊದಲರ್ಧವನ್ನು ಒಂದು ಬಾಕ್ಸಿಗೆ 'ನಾನು ಮಡೂಕನಿಗೆ ಮತ ಹಾಕಿದೆ' ಎಂದ. ಇನ್ನೊಂದು ಅರ್ಧವನ್ನು ಮತ್ತೊಂದು ಬಾಕ್ಸಿಗೆ ಹಾಕಿದ.**

**ಮತಕೇಂದ್ರಕ್ಕೆ ಮತ್ತೊಮ್ಮೆ ಬಾರದಂತೆ ಆತನ ಹೆಬ್ಬೆರಳಿಗೆ ನೇರಳೆ ಶಾಯಿಯನ್ನು ಹಾಕುತ್ತಿದ್ದಂತೆ ಹರ್ಷದೊಂದಿಗೆ ಮತಕೇಂದ್ರದಿಂದ ಹೊರನಡೆದ.**

## ಚಿನುವಾ ಅಚಿಬೆ

ತನ್ನ 'ಥಿಂಗ್ಸ್ ಫಾಲ್ ಅಪಾರ್ಟ್' ಕೃತಿಯಿಂದ ಜಗದ್ವಿಖ್ಯಾತನಾದ ನೈಜೀರಿಯಾದ ಲೇಖಕ ಚಿನುವಾ ಅಚಿಬೆ(1930–2013). ಇಗ್ಬೊ ಬುಡಕಟ್ಟು ಜನಾಂಗದ ಆಶೋತ್ತರಗಳನ್ನು ತನ್ನ ಕತೆ, ಕಾದಂಬರಿ, ಕಾವ್ಯಗಳಲ್ಲಿ ಬಿಂಬಿಸಿದ ಲೇಖಕ. ಇಪ್ಪತ್ತನೇ ಶತಮಾನದ ಶುರುವಿನಲ್ಲಿ ನೈಜೀರಿಯಾದ ಮೇಲೆ ನಿಯಂತ್ರಣ ಸಾಧಿಸಿದ ಬ್ರಿಟಿಷರು ತಮ್ಮ ಧರ್ಮ ಹಾಗೂ ಪಾಶ್ಚಾತ್ಯ ಶಿಕ್ಷಣ ಕ್ರಮವನ್ನು ಪರಿಚಯಿಸಿದ್ದರ ಪರಿಣಾಮ ಬುಡಕಟ್ಟು ಜನಾಂಗದ ಆಚರಣೆ ಮತ್ತು ನಂಬಿಕೆಗಳು ದುರ್ಬಲಗೊಂಡವು. ತನ್ನ ಜನಾಂಗದ ನಂಬಿಕೆ, ವಿಚಾರ ಹಾಗೂ ಜನಪದ ಕಥನ ಶೈಲಿಯಿಂದ ಪ್ರಭಾವಿತನಾಗಿದ್ದ ಅಚಿಬೆಯ ಕೃತಿಗಳು ಬ್ರಿಟಿಷ್ ಆಳ್ವಿಕೆ ಮತ್ತು ನಂತರದ ಪಾಶ್ಚಿಮಾತ್ಯ ಹಾಗೂ ಸಾಂಪ್ರದಾಯಿಕ ಮೌಲ್ಯಗಳ ಸಂಘರ್ಷವನ್ನು ಬಿಂಬಿಸುತ್ತವೆ. 'ಆರೋ ಆಫ್ ಗಾಡ್', 'ಎನಿಮಿ ಆಫ್ ದ ಪೀಪಲ್', 'ನೋ ಲಾಂಗರ್ ಅಟ್ ಈಸ್' ಆತನ ಇನ್ನಿತರ ಪ್ರಮುಖ ಕೃತಿಗಳು.

## ಗೊರೂರು ಶಿವೇಶ

ಪ್ರಸ್ತುತ ಹಾಸನದಲ್ಲಿ ನೆಲೆಸಿರುವ ಅನುವಾದಕರು ವೃತ್ತಿಯಿಂದ ಆಂಗ್ಲಭಾಷಾ ಉಪನ್ಯಾಸಕರು. ಲಲಿತ ಪ್ರಬಂಧ ಹಾಗೂ ಹಾಸ್ಯಬರಹಗಳೆಡೆಗೆ ಹೆಚ್ಚಿನ ಆಸಕ್ತಿ. 'ಮೀನಿನ ಹೆಜ್ಜೆಯನ್ನರಸುತ್ತಾ', 'ಸಂತೆಯೊಳಗೊಂದು ಮನೆಯ ಮಾಡಿ', 'ಅರ್ಥಅನರ್ಥ', 'ಗೊರೂರು ರಸಪ್ರಸಂಗಗಳು', 'ಹುತ್ತಗಟ್ಟಿದ ಚಿತ್ತ' ಮತ್ತು 'ಎದೆಯೊಳಗಿನ ಹಾಡು' ಇವರ ಪ್ರಕಟಿತ ಕೃತಿಗಳು.